


## ರವಿಕುಮಾರ್ ಕಾಶಿ ಕಲಾಪ್ರದರ್ಶನ

# ‘ಸಮಕಾಲೀನ ಸ್ಪಂದನದಷ್ಟೇ ಕಲಾಕೃತಿಯಾಗಿ ಯಶಸ್ವಿ ಆಗುವುದೂ ಮುಖ್ಯ’

**ಈ ಕಾಲದ ಬಹುಮುಖ್ಯ ಕಲಾವಿದರಲ್ಲಿ ಒಬ್ಬರಾದ ರವಿಕುಮಾರ್ ಅವರ ಹೊಸ ಕಲಾಕೃತಿಗಳ ಪ್ರದರ್ಶನ (ದ ಅನ್‌ರೂಲಿ ಸಿಂಟೆಕ್ಸ್) ಡಿ. 4ರಿಂದ ಜ.22ರವರೆಗೆ ಬೆಂಗಳೂರಿನಲ್ಲಿ ನಡೆಯುತ್ತಿದೆ. ಬೆಂಗಳೂರಿನ ‘ಗ್ಯಾಲರಿ ಸುಮುಖ’ದಲ್ಲಿ ನಡೆಯುತ್ತಿರುವ ಈ ಕಲಾಪ್ರದರ್ಶನದ ಸಂದರ್ಭದಲ್ಲಿ ಅವರೊಂದಿಗೆ ‘ಸುಧಾ’ ನಡೆಸಿದ ಮಾತುಕತೆಯ ಮುಖ್ಯಾಂಶಗಳು ಇಲ್ಲಿವೆ.**

■ ಸಂದರ್ಶನ: **ಪದ್ಮನಾಭ ಭಟ್**

‘ಕಲೆ ಎಂಬುದು ಹೃದಯದೊಂದಿಗೆ ನಡೆಸುವ ಸಂವಾದ’ ಎಂಬ ಮಾತಿದೆ. ಹೀಗೆ ಸಹೃದಯಿಗಳ ಜೊತೆಗೆ ಸಂವಾದ ಮಾಡುತ್ತಲೇ ಅವರ ‘ನೋಟ’ವನ್ನೂ ತಿದ್ದುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಅಪರೂಪದ ಕಲಾವಿದ ರವಿಕುಮಾರ್ ಕಾಶಿ. ಕೃತಿರಚನೆ, ಬೋಧನೆ, ಬರವಣಿಗೆ – ಈ ಮೂರೂ ಬಗೆಗಳಲ್ಲಿಯೂ ಕಲಾಸಂವಾದ ನಡೆಸುತ್ತಿರುವ ಕಾಶಿ ಅವರ ಎಲ್ಲ ಕೃತಿಗಳಲ್ಲಿಯೂ ಮುಖ್ಯವಾಗಿ ಕಾಣಿಸುವುದು ಮನುಷ್ಯನ ದೈನಿಕದ ಪರಿಕರಗಳನ್ನೇ ಕಲಾಭಿವ್ಯಕ್ತಿಗೆ ಒಗ್ಗಿಸುವ ಪ್ರಯತ್ನ.

ಕಾಶಿ ಅವರ ಕಲಾಕೃತಿಗಳನ್ನು ಕಾಣುವುದೆಂದರೆ, ವರ್ತಮಾನದ ಒಳಸುಳಿಗಳಿಗೆ ಸಿಕ್ಕು ಗಿರಗಿಟ್ಲೆ ಹೊಡೆದುಬಂದ ಹಾಗೆ. ನೋಡುವ ಕ್ರಮವನ್ನು ತುಸುವೇ ಪಲ್ಲಟಗೊಳಿಸುವ ಮೂಲಕವೇ ಗಮನವಾದ ಕಾಣ್ಕೆಯನ್ನು ಹುಟ್ಟಿಸುವ ಅವರ ಹೊಸ ಕಲಾಕೃತಿಗಳು ನಗರ ಸಂವೇದನೆಯ ಹಲವು ಪದರಗಳನ್ನು ದರ್ಶಿಸುವ ಧ್ವನಿಶಕ್ತಿಯನ್ನು ಹೊಂದಿವೆ.

◆ ‘ದ ಅನ್‌ರೂಲಿ ಸಿಂಟೆಕ್ಸ್’ ಕಲಾಕೃತಿಗಳು ಹುಟ್ಟಿಕೊಂಡ ಕುರಿತು ಹೇಳಿ.

ನಾನು ಬೆಳೆದಿದ್ದೆಲ್ಲ ನಗರದಲ್ಲಿ. ಹಾಗಾಗಿ ನಗರದ ಅನುಭವ ಬಹಳ ವರ್ಷಗಳಿಂದಲೂ